ಅಭಿನಂದನೆಯನ್ನು ಸಲ್ಲಿಸಬೇಕು ಎಂದು ತಮ್ಮ ಅಪ್ಪಣೆ ಪಡೆಯುತ್ತೇನೆ. ಅವಕಾಶಕೊಟ್ಟರೆ ಅವರ ಸೇವೆಯನ್ನು ಸ್ಮರಿಸಬೇಕು ಎಂದು ನಾನು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಕಾವೇರಿ ಜಲವಿವಾದದ ಸಂಬಂಧವಾಗಿ ಇದು ಒಂದು ಬಹಳ ಕಠಿಣವಾದ ಸತ್ಯಾಗ್ರಹ. ಕನ್ನಂಬಾಡಿಯಿಂದ ಬೆಂಗಳೂರಿಗೆ ಎಡೆಬಿಡದೆ ಉರುಳಿಕೊಂಡು ಬಂದಿರುವುದು ಬಹಳ ಕಠಿಣವಾದ ಪ್ರಸಂಗ. ಅವರಲ್ಲಿರತಕ್ಕ ಭಾವನೆಯಿಂದ ಈ ನಾಡಿಗೆ ಅನ್ಯಾಯ ಆಗಿದೆ ಎನ್ನತಕ್ಕ ವಿಷಯ ಬಹಳ ಉತ್ತಮವಾದ ಮತ್ತು ಕಠಿಣವಾದ ಸತ್ಯಾಗ್ರಹದಲ್ಲಿ ಬಂದಿದ್ದಾರೆ. ನಾವು ನಾಡಿನ ಪರವಾಗಿ ನಾಲ್ಕು ಕೋಟಿ ಕನ್ನಡಿಗರ ಪರವಾಗಿ ಅಭಿನಂದನೆಯನ್ನು ಸಲ್ಲಿಸಬೇಕು. ಅವರು ಸತ್ಯಾಗ್ರಹವನ್ನು ಮುಂದುವರಿಸದೇ ಬಿಟ್ಟು ಬಿಡುವುದು ಒಳ್ಳೆಯದು. ಏಕೆಂದರೆ ಮತ್ತೆ ಇದರ ಬಗ್ಗೆ ವಾದ ವಿವಾದ ಮಾಡುವುದು ಬೇಡ. ಮಾತುಕತೆ ಮೂಲಕ ಇದು ಪರಿಹಾರ ಆಗಬೇಕು. ಎಂದು ಪ್ರಧಾನ ಮಂತ್ರಿಗಳನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಭೇಟಿ ಮಾಡಿ ತಿಳಿಸಿದ್ದಾರೆ. ಈ ವಿಷಯಕ್ಕೆ ಸಂಬಂದಪಟ್ಟಂತೆ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳೂ ಭೇಟಿ ಮಾಡಿರತಕ್ಕದ್ದು. ಮಾತುಕತೆ ಮೂಲಕ ಸಮಸ್ಯೆಯನ್ನು ಪರಿಹರಿಸಬೇಕು ಎಂದು ಶಾಸನಸಭೆ ಒಂದು ನಿರ್ಣಯ ಮಾಡಿದೆ. ಆದ್ದರಿಂದ ಇವತ್ತು ಇಲ್ಲಿ ವಿಧಾನಸೌಧಕ್ಕೆ ಬಂದಿದ್ದಾರೆ. ಅಷ್ಟಕ್ಕೆ ಅವರು ಸತ್ಯಾಗ್ರಹವನ್ನು ನಿಲ್ಲಿಸಲಿ. ಅವರು ತಮ್ಮ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳುವುದು ಒಳ್ಳೆಯದೆಂದು ತಮ್ಮ ಮೂಲಕ ನಾನು ಅವರಿಗೆ ಸೂಚಿಸಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಸುಮಾರು ನಾಲ್ಕೂವರೆ ಕೋಟಿ ಜನರ ಭಾವನೆ ಏನು ಇತ್ತು, ಈ ಒಂದು ಕಠಿಣವಾದ ಸತ್ಯಾಗ್ರಹದಿಂದ ಕೇಂದ್ರ ಸರ್ಕಾರಕ್ಕೆ ವ್ಯಕ್ತ ಪಡಿಸುವಂತಹ ಪ್ರಾಮಾಣಿಕವಾದ ಪ್ರಯತ್ನವನ್ನು ಅವರು ಮಾಡಿದ್ದಾರೆ. ನಿಜಕ್ಕೂ ಅವರು ಮಾಡಿದಂತಹ ಹೋರಾಟಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕು. ಮತ್ತು ಈ ರೀತಿ ಹೋರಾಟ ಮಾಡುವಂತಹವರಿಗೆ ಕೈಜೋಡಿಸಿ ಅವರ ಭಾವನೆಗಳನ್ನು ಅರ್ಥಮಾಡಿಕೊಂಡು ನ್ಯಾಯ ಸಿಕ್ಕುವ ಪ್ರಮಾಣಿಕವಾದ ಪ್ರಯತ್ನವನ್ನು ನಾವು ಮಾಡಬೇಕು. ಅವರು ಇಲ್ಲಿಗೆ ಬಂದಾಗ ಸಂಬಂಧಪಟ್ಟ ಮಂತ್ರಿಗಳು ಯಾರಾದರೂ ಅವರನ್ನು ಸ್ವಾಗತ ಮಾಡಿ ನಾವೆಲ್ಲಾ ನಿಮ್ಮ ಜೊತೆ ಇದ್ದೇವೆ. ನಿಮ್ಮ ಕಳಕಳಿ ನಮಗೆ ಅರ್ಥ ಆಗಿದೆ ಎಂದು ಹೇಳಲಿ. ಈ ಕಾರ್ಯಕ್ರಮ ಅವರು ನಿಲ್ಲಿಸಲಿ. ಅವರು ಇಲ್ಲಿಂದ ವಾಪಸ್ ಹೋಗುವುದಕ್ಕೆ ಬೇಕಾದಂತಹ ಸವಲತ್ತುಗಳನ್ನು ಒದಗಿಸಿಕೊಟ್ಟು ಅವರಿಗೆ ಗೌರವ ಸೂಚಿಸುವಂತಹ ಒಂದು ಕಾರ್ಯಕ್ರಮ ಸರ್ಕಾರದ ಕಡೆಯಿಂದ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರಾದ ಶ್ರೀಮಾನ್ ವಾಟಾಳ್ ಅವರು, ಯಡಿಯೂರಪ್ಪನವರು ವ್ಯಕ್ತಪಡಿಸಿದಂತಹ ಅಭಿಪ್ರಾಯಗಳಿಗೆ ನಮ್ಮದು ಭಿನ್ನಾಭಿಪ್ರಾಯ ಇಲ್ಲ. ಏಕೆಂದರೆ ಪತ್ರಿಕೆಯಲ್ಲಿ ನೋಡಿದಂತೆ ಮತ್ತು ನಾವು ಕೇಳಿ ತಿಳಿದುಕೊಂಡಂತೆ ಕಠಿಣವಾದ ಪರಿಶ್ರಮವನ್ನು ವಹಿಸಿ ಬಹುಶಃ ಒಂದು ನವೀನ ರೀತಿಯಲ್ಲಿ ವೈಶಿಷ್ಟಪೂರ್ಣವಾದ ರೀತಿಯಲ್ಲಿ ತ್ಯಾಗಪೂರ್ಣ ಮನೋವೃತ್ತಿಯಿಂದ ಆ ಸತ್ಯಾಗ್ರಹ ಬಂದಿದ್ದಾರೆ. ಅವರಿಗೆ ಸರ್ಕಾರದ ಪರವಾಗಿ ಈ ಸದನದ ಪರವಾಗಿ ನಾವು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ.

ಅವರು ಹಿಂದೆ ತಮ್ಮ ಊರಿಗೆ ಹೋಗಲಿಕ್ಕೆ ಮಾಡತಕ್ಕಂಥ ವ್ಯವಸ್ಥೆಯನ್ನು ನಾವು ಅವರ ಹತ್ತಿರವೇ ವಿಚಾರಿಸಿ ಅದರ ಪ್ರಕಾರ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(2) ಹೆಗ್ಗಡದೇವನಕೋಟೆಯಲ್ಲಿ ಕುಡಿಯುವ ನೀರಿನ ಅಭಾವ

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಹೆಗ್ಗಡದೇವನಕೋಟೆಯಲ್ಲಿ ಕುಡಿಯಲು ನೀರು ಸಿಗದೆ ಸತ್ತಿರತಕ್ಕಂಥ ಪರಿಸ್ಥಿತಿ ಬಂದಿದೆ. ಸರಕಾರದವರು ನಾನಾ ಯೋಜನೆಗಳನ್ನು ಮಾಡಿದ್ದಾರೆ, ಬೇರೆ ಬೇರೆ ರೀತಿಯಲ್ಲಿ ಅನುಕೂಲವನ್ನು ಮಾಡಿಕೊಡುತ್ತೇವೆ ಎಂದು ಹೇಳುತ್ತಾ ಇರುತ್ತಾರೆ. ಆದರೆ ಕುಡಿಯುವ ನೀರು ಅಲ್ಲಿ ಇಲ್ಲದೆ ಸತ್ತಿದ್ದಾರೆ ಅಂದರೆ ಅಲ್ಲಿನ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ ಎಂಬುದು ಅರ್ಥವಾಗುತ್ತಾ ಇಲ್ಲ. ಅಲ್ಲಿ ಪರಿಸ್ಥಿತಿಯು ಏನಾಗಿದೆ ಎಂಬ ಬಗ್ಗೆ ನೋಡಿ ಸರಕಾರದವರು ಕ್ರಮ ತೆಗೆದುಕೊಳ್ಳಬೇಕು. ಈ ಹಿಂದೆ ಆಹಾರ ಸಿಗದೆ ಸತ್ತಿರತಕ್ಕಂಥಾದ್ದು ಜನಜನಿತ. ಅದು ದೊಡ್ಡ ಸುದ್ದಿಯೂ ಆಯಿತು. ಹಾಗಿದ್ದಲ್ಲಿ ಕಾಡು ಪ್ರದೇಶದಲ್ಲಿನ